ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು) :

ಅ) ಇಲ್ಲ.

ಆ) ಈ ಬಗ್ಗೆ ನಗರಾಭಿವೃದ್ಧಿ ಇಲಾಖೆಯಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಇ) ಚಿಂತಾಮಣಿ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ.

ಸರ್ಕಾರಿ ನೌಕರರಿಗೆ ಸಂಬಂಧಿಸಿದ ಕೆ.ಜಿ.ಐ.ಡಿ ಪಾಲಿಸಿಗಳು

1016 (1233) - ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್ (ಅಥಣಿ) ಮಾನ್ಯ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರ ವಿಮಾ ಇಲಾಖೆಯ ಎಲ್ಲಾ ಜಿಲ್ಲಾ ಕಛೇರಿಗಳಲ್ಲಿ ಸರಿಯಾಗಿ ಕೆಲಸ ಕಾರ್ಯಗಳು ನಡೆಯದೆ ಬಡ ಸರ್ಕಾರಿ ನೌಕರರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸುಧಾರಣೆ ತರುವ ಸಲುವಾಗಿ ಸರ್ಕಾರವು ಯಾವ ಕ್ರಮಗಳನ್ನು ಕೈಗೊಂಡಿದೆ:

ಆ) ಸಾಮಾನ್ಯ ಭವಿಷ್ಯ ನಿಧಿ ಖಾತೆಯಲ್ಲಿ ಗಣಕೀಕರಣ ಆಳವಡಿಸಲಾಗಿದ್ದು ಎಲ್ಲಾ ಖಾತೆಗಳು ಅಪ್ಟುಡೇಟ್ ಆಗಿರುತ್ತದೆ: ಇದೇ ರೀತಿ ಕೆ.ಜಿ.ಐ.ಡಿ.ಯಲ್ಲಿಯೂ ಕೂಡ ಗಣಕೀಕರಣವನ್ನು ಏಕೆ ಅಳವಡಿಸಬಾರದು:

ಇ) ಕರ್ನಾಟಕ ಸರ್ಕಾರದ ವಿಮಾ ಇಲಾಖೆಯಲ್ಲಿ ಸುಧಾರಣೆಗಳನ್ನು ತಂದು ಇತರೆ ವಿಮಾ ಸಂಸ್ಥೆಗಳೊಂದಿಗೆ ಸ್ಪರ್ಧಾತ್ಮಕ ಭಾವನೆ ಉಂಟು ಮಾಡಿ ಸರ್ಕಾರಕ್ಕೆ ಲಾಭ ಹಾಗೂ ಸರ್ಕಾರಿ ನೌಕರರಿಗೆ ಅನುಕೂಲತೆಯನ್ನು ಕಲ್ಪಿಸಲಾಗುವುದೇ?

ಶ್ರೀ ಬಾಬುರಾವ್ ಚಿಂಚಸನೂರು (ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು) :

ಅ) ಇಲ್ಲ ಅದೇ ಸಮಯದಲ್ಲಿ ಇಲಾಖೆಯ ಕೆಲಸ ಕಾರ್ಯಗಳನ್ನು ಹೆಚ್ಚಿನ ದಕ್ಷತೆಯಿಂದ ನಡೆಸಲು ಸಂಬಂಧಿಸಿದ ಅಂಕಿ ಅಂಶಗಳ ಗಣಕೀಕರಣ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

ಆ) ಇಲಾಖೆಯ ಕೆಲಸ ಕಾರ್ಯಗಳನ್ನು ಗಣಕೀಕರಣಗೊಳಿಸುವ ಪ್ರಕ್ರಿಯೆಯು ಈಗಾಗಲೇ ಪ್ರಾರಂಭವಾಗಿದೆ.

ಇ) ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯು ಸರ್ಕಾರಿ ರಂಗದೊಡನೆ ಮಾತ್ರ ವಿಮಾ ವಹಿವಾಟನ್ನು ನಿರ್ವಹಿಸುತ್ತಿರುವುದರಿಂದ ಇತರ ಖಾಸಗಿ ವಿಮಾ ಕಂಪನಿಗಳು ಹಾಗೂ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ನಡುವೆ ಯಾವುದೇ ಸ್ಪರ್ಧೆ ಇರುವುದಿಲ್ಲ. ಅದಾಗ್ಯೂ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯು ಸರ್ಕಾರಿ ನೌಕರರಿಗೆ ಕಡಿಮೆ ದರದ ವಿಮಾ ಕಂತು ಹಾಗೂ ಹೆಚ್ಚಿನ ಬೋನಸ್ ನೀಡುವ ಅವಕಾಶ ಕಲ್ಪಿಸಿದ್ದು ಇದು ಸಾಕಷ್ಟು ಸ್ಪರ್ಧಾತ್ಮಕವಾಗಿದೆ.

ಕಾರ್ಕಳಕ್ಕೆ ಬಸ್ ಸೌಕರ್ಯ

1018 (1171) - ಶ್ರೀ ಹೆಚ್. ಗೋಪಾಲ ಬಂಡಾರಿ (ಕಾರ್ಕಳ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಕಾರ್ಕಳದ ಮೂಲಕ ಪ್ರಯಾಣಿಸುತ್ತಿರುವ ಬಸ್ಸುಗಳಲ್ಲಿ ಹೆಚ್ಚಿನ ಬಸ್ಸುಗಳು ಕಾರ್ಕಳದಲ್ಲಿ ನಿಲ್ಲಿಸದೇ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಕಾರ್ಕಳವು ಒಂದು ತಾಲ್ಲೂಕು ಕೇಂದ್ರವಾಗಿದ್ದು ವಾಹನಗಳನ್ನು ನಿಯಂತ್ರಿಸಲು ವಾಹನ ನಿಯಂತ್ರಕರ ಕಛೇರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ;

ಇ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು) :

ಅ) ಹೌದು.

ಆ) ಹೌದು.

ಇ) ಕಾರ್ಕಳದಲ್ಲಿ ದಿನಾಂಕ: 19-7-2002 ರಿಂದ ಒಬ್ಬ ಸಂಚಾರಿ ನಿಯಂತ್ರಕರನ್ನು ನೇಮಿಸಿದ್ದು ಇವರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಹಾಗೂ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸಾರಿಗೆಗಳನ್ನು ನಿಯಂತ್ರಿಸುತ್ತಿದ್ದಾರೆ.

ಔರಾದ್ ತಾಲ್ಲೂಕಿನ ಬಾಲೂರು ಗ್ರಾಮದ ಹತ್ತಿರ ಬ್ರಿಡ್ಜ್ - ಕಂ - ಬ್ಯಾರೇಜ್ ಕಟ್ಟುವುದು

1020 (1268) - ಶ್ರೀ ಗುಂಡಪ್ಪ ವಕೀಲ್ (ಔರಾದ್) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನ ಬಾಲೂರ ಗ್ರಾಮದ ಹತ್ತಿರ ಬ್ರಿಡ್ಜ್-ಕಂ-ಬ್ಯಾರೇಜ್ ಕಟ್ಟುವ ವಿಚಾರ ಸರ್ಕಾರದ ಮುಂದೆಯೇ;

ಆ) ಈ ಬಗ್ಗೆ ಸರ್ಕಾರದ ಮಂಜೂರಾತಿ ದೊರಕಿದೆಯೇ;

ಇ) ಕಾಮಗಾರಿ ಕೈಗೊಳ್ಳಲು ಸರ್ಕಾರ ಮಂಜೂರಾತಿ ನೀಡುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಹೌದು.

ಆ) ಸದರಿ ಕಾಮಗಾರಿಯು ವರ್ಷ 2001-02ನೇ ಸಾಲಿನ ಆಯವ್ಯಯದಲ್ಲಿ ರೂ. 65.00 ಲಕ್ಷ ಅಂದಾಜುದೊಂದಿಗೇ ಸೇರ್ಪಡೆಯಾಗಿದ್ದು, ರೂ. 17.00 ಲಕ್ಷ ಅನುದಾನವಿತ್ತು ಮತ್ತು ಅಂದಾಜು ಪಟ್ಟಿಯನ್ನು ತಾಂತ್ರಿಕ ಮೌಲ್ಯ, ನಿರ್ಣಯ ಸಮಿತಿಯ ಮುಂದೆ ಮಂಡಿಸಿದ್ದು, ಆ ಸಮಿತಿಯು ನೀಡಿದ ಸೂಚನೆಯಂತೆ ಅಂದಾಜು ಪಟ್ಟಿಯನ್ನು ಮಾರ್ಪಡಿಸಲಾಗಿ, ಅಂದಾಜು ಮೊತ್ತದ ರೂ. 96.00 ಲಕ್ಷಗಳಾಗಿದೆ.

ಇ) ಅನುದಾನದ ಲಭ್ಯತೆಯ ಆಧಾರದ ಮೇರೆಗೆ ಮಂಜೂರಾತಿ ನೀಡಲು ಕ್ರಮವನ್ನು ಕೈಗೊಳ್ಳಲಾಗುವುದು.

ಔರಾದ್ ಪಟ್ಟಣಕ್ಕೆ ಅಗ್ನಿಶಾಮಕ ಸೇವೆ ಪ್ರಾರಂಭಿಸುವುದು

1022 (1270) - ಶ್ರೀ ಗುಂಡಪ್ಪ ವಕೀಲ್ (ಔರಾದ್) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲಾ ಔರಾದ ಪಟ್ಟಣಕ್ಕೆ ಅಗ್ನಿಶಾಮಕ ಸೇವೆ ಘಟಕ ಮಂಜೂರಾಗಿ ಕಛೇರಿ ಸೇವೆ ಪ್ರಾರಂಭವಾಗದೇ 2 ವರ್ಷಗಳಿಂದ ನೆನೆಗಾದಿಗೆ ಬಿದ್ದಿರುವ ಸಂಗತಿ ಸರ್ಕಾರಕ್ಕೆ ತಿಳಿದಿದೆಯೇ?